(ಅ) ರಾಯಚೂರು ಜಿಲ್ಲೆಗೆ ಬರಗಾಲ ಕಾಮಗಾರಿ ಕೆಲಸಗಳಿಗೆ ಸರ್ಕಾರ ಬಿಡುಗಡೆ ಮಾಡಿದ ಹಣವೆಷ್ಟು?

(ಆ) ಅದರಲ್ಲಿ ಎಷ್ಟು ಹಣ ಇಲ್ಲಿಯವರೆಗೆ ಖರ್ಚಾಗಿರುವುದು; (ತಾಲ್ಲೂಕುವಾರು ಮಾಹಿತಿ ನೀಡುವುದು)

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು)

ಪ್ರಸಕ್ತ ಹಣಕಾಸು ಸಾಲಿನಲ್ಲಿ ಸರ್ಕಾರವು 105.00 ಲಕ್ಷ ರೂಪಾಯಿಗಳನ್ನು ರಾಯಚೂರು ಜಿಲ್ಲೆಗೆ ಬರ ಪರಿಹಾರ ಕಾರ್ಯಕ್ರಮಗಳಿಗಾಗಿ ಬಿಡುಗಡೆ ಮಾಡಿದೆ.

61.13 ಲಕ್ಷ ರೂಪಾಯಿಗಳನ್ನು ಜಿಲ್ಲೆಯಲ್ಲಿ ಬರ ಪರಿಹಾರ ಕಾರ್ಯಕ್ರಮಗಳಿಗಾಗಿ ವೆಚ್ಚ ಮಾಡಲಾಗಿದೆ. ತಾಲ್ಲೂಕುವಾರು ವಿವರಗಳು ಈ ಕೆಳಕಂಡಂತಿವೆ-

(ಲಕ್ಷ ರೂ.ಗಳಲ್ಲಿ)

	ತಾಲ್ಲೂಕಿನ ಹೆಸರು	ಖರ್ಚುಮಾಡಲಾದ ಹಣ
1	ರಾಯಚೂರು	5.60
2	ಮಾನ್ವಿ	5.07
3	ದೇವದುರ್ಗ	3.87
4	ಲಿಂಗಸುಗೂರು	15.48
5	ಸಿಂಧನೂರು	6.20
6	ಕುಷ್ಟಗಿ	5.75
7	ಕೊಪ್ಪಳ	7.44
8	ಗಂಗಾವತಿ	5.39
9	ಯಲಬುರ್ಗ	6.33
	ಒಟ್ಟು	61.13

ವಿಷಯ: - ಬೆಳಗಾವಿ ಜಿಲ್ಲೆಯಲ್ಲಿಯ ದೇವಸ್ಥಾನಗಳಿಗೆ ಜೀರ್ಣೋದ್ಧಾರಕ್ಕಾಗಿ ಮಂಜೂರು ಮಾಡಲಾದ ಹಣದ ಬಗ್ಗೆ.

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 384(464)

ಶ್ರೀ ಕೆ.ಸಿ. ಮೊಡಗೇಕರ್ ದೇಸಾಯಿ(ಬಾಗೇವಾಡಿ)

ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) 1991-92 ಹಾಗೂ 1992-93ನೇ ಸಾಲಿನಲ್ಲಿ ಬೆಳಗಾವಿ ಜಿಲ್ಲೆಯಲ್ಲಿಯ ದೇವಸ್ಥಾನಗಳಿಗೆ ಜೀರ್ಣೋದ್ಧಾರಕ್ಕಾಗಿ ಹಾಗೂ ಕಲ್ಯಾಣಮಂಟಪ ಕಾಮಗಾರಿಗಳಿಗಾಗಿ ಧರ್ಮದತ್ತಿ ಇಲಾಖೆಯಿಂದ ಮಂಜೂರಾದ ಹಣ ಎಷ್ಟು (ತಾಲ್ಲೂಕುವಾರು ಮಾಹಿತಿ)

2) ಈ ಕಾಮಗಾರಿಗಳು ಯಾವ ಹಂತದಲ್ಲಿ ಇರುತ್ತವೆ, ಕಾಮಗಾರಿಗಳು ಪೂರ್ಣಗೊಳ್ಳದೇ ಇದ್ದಲ್ಲಿ ಅವುಗಳನ್ನು ಪೂರ್ಣಗೊಳಿಸಲು ಸರಕಾರಿ ಅನುದಾನ ಮಂಜೂರು ಮಾಡಲಾಗುವುದೋ ಹೇಗೆ?

3) ಹಾಗಿದ್ದರೆ ಈ ಸಂಸ್ಥೆಗಳು ಯಾವುವು?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು)

1991-92 ಮತ್ತು 1992-93ರ ಸಾಲಿನ ತಾಲ್ಲೂಕುವಾರು ಮಾಹಿತಿಗಳನ್ನು ಅನುಬಂಧ 'ಅ'ರಲ್ಲಿ ನೀಡಿದೆ.

ದೇವಸ್ಥಾನ ಧರ್ಮಸಂಸ್ಥೆಗಳ ರಿಪೇರಿ ನಿರ್ಮಾಣ ಇತ್ಯಾದಿಗಳ ಒಟ್ಟು ಅಂದಾಜಿನ ಭಾಗಾಂಶ ಹಣವನ್ನು ಮಾತ್ರ ಸರ್ಕಾರವು ಸಂಸ್ಥೆಗಳಿಗೆ ನೀಡಲಾಗಿದ್ದು ಉಳಿದ ಹಣವನ್ನು ಸಾರ್ವತ್ರಿಕ ವಂತಿಗೆ ಮತ್ತು ಸಂಸ್ಥೆಯ ನಿಧಿಯಿಂದ ಭರಿಸುತ್ತದೆ.

ಸರ್ಕಾರದಿಂದ ಬಿಡುಗಡೆಯಾದ ಹಣವನ್ನು ಸಂಬಂಧಿಸಿದ ಸಂಸ್ಥೆಗಳಿಗೆ ಬಿಡುಗಡೆ ಮಾಡಲಾಗುತ್ತದೆ. ದಿ ಬಾಂಬೆ ಪಬ್ಲಿಕ್ ಟ್ರಸ್ಟ್ಸ್ ಆಕ್ಟ್ 1950ರ ಕಾಯ್ದೆ ಅನ್ವಯ ಸ್ವಾಯುಕ್ತ ಸಂಸ್ಥೆಗಳಾಗಿದ್ದು ಅವುಗಳ ಪದಾಧಿಕಾರಿಗಳೇ ಸಂಬಂಧಪಟ್ಟ ಕಾಮಗಾರಿಯ ನಿರ್ವಹಣೆಯ ಜವಾಬ್ದಾರಿ ಹೊಂದಿರುತ್ತಾರೆ. ಆದ್ದರಿಂದ ಕಾಮಗಾರಿಗಳ ಹಂತಗಳನ್ನು ಸರ್ಕಾರದ ಮಟ್ಟದಲ್ಲಿ ತಿಳಿಸಲು ಬರುವುದಿಲ್ಲ. ಒಂದು ವೇಳೆ ಒದಗಿಸಿದ ಹಣವೂ ಸದರೀ ಕಾಮಗಾರಿಯ ಪೂರ್ಕೆಗೆ ಸಾಲದಿದ್ದಲ್ಲಿ ಸಂಸ್ಥೆಯವರು ಮರು ಅನುದಾನಕ್ಕೆ ಅರ್ಜಿ ಸಲ್ಲಿಸುವ ಅವಕಾಶವಿದೆ. ಆದರಂತೆ ಹಣವನ್ನು ಒದಗಿಸುವ ಸಾಧ್ಯತೆಗಳು ಇವೆ.

ಅಂತಹ ಪ್ರಸ್ತಾವನೆಗಳು ಸರ್ಕಾರಕ್ಕೆ ಬಂದಿರುವುದಿಲ್ಲ.

"ಅನುಬಂಧ-ಅ"

ಮಂಜೂರಿ ವರ್ಷ 1991-92,

ಕಾಮಗಾರಿ-ರಿಪೇರಿ ಮತ್ತು ಜೀರ್ಣೋದ್ಧಾರ,

ಮಂಜೂರು ಆದೇಶ ಸಂಖ್ಯೆ : ಆರ್‌ಡಿ 150 ಎಂಎಲ್‌ಡಿ : 91, ದಿನಾಂಕ : 28-3-1992.

	ತಾಲ್ಲೂಕಿನ ಹೆಸರು	ಮಂಜೂರಾದ ಹಣ	ಸಂಸ್ಥೆಗಳ ಸಂಖ್ಯೆ :
	1	2	3
1.	ಗೋಕಾಕ	20,000-00	2
2.	ಬೆಳಗಾವಿ	20,000-00	2
3.	ಹುಕ್ಕೇರಿ	10,000-00	1
4.	ಸವದತ್ತಿ	30,000-00	3
5.	ಖಾನಾಪೂರ	10,000-00	1
6.	ಬೈಲಹೊಂಗಲ	10,000-00	1
7.	ಅಥಣಿ	10,000-00	1
8.	ಚಿಕ್ಕೋಡಿ	10,000-00	1

ಮಂಜೂರಿ ಆದೇಶ ಸಂಖ್ಯೆ : ಆರ್‌ಡಿ : 150 : ಎಂಎಲ್‌ಡಿ 91, ದಿನಾಂಕ : 25-11-1991.

1.	ಗೋಕಾಕ	20,000-00	1
2.	ಹುಕ್ಕೇರಿ	10,000-00	1
3.	ಬೈಲಹೊಂಗಲ	50,000-00	3

4.	ಚಿಕ್ಕೋಡಿ	20,000-00	1

ಮಂಜೂರಿ ವರ್ಷ 1991-92

ಕಾಮಗಾರಿ ನಿರ್ಮಾಣ ಕಲ್ಯಾಣ ಮಂಟಪ

ಸರ್ಕಾರಿ ಆದೇಶ ಸಂಖ್ಯೆ : ಆರ್‌ಡಿ 168 ಎಂಎಲ್‌ಡಿ 91,ದಿನಾಂಕ : 28-3-92.

1.	ಗೋಕಾಕ	25,000-00	2
2.	ಬೈಲಹೊಂಗಲ	70,000-00	5
3.	ಬೆಳಗಾವಿ	15,000-00	1
4.	ಸವದತ್ತಿ	35,000-00	3
5.	ಹುಕ್ಕೇರಿ	10,000-00	1

ಸರ್ಕಾರಿ ಆದೇಶ ಸಂಖ್ಯೆ : ಆರ್‌ಡಿ 168 : ಎಂಎಲ್‌ಡಿ 91, ದಿನಾಂಕ : 25-11-91

1.	ಗೋಕಾಕ	20,000-00	1
2.	ಬೈಲಹೊಂಗಲ	70,000-00	3
3.	ಬೆಳಗಾವಿ	75,000-00	3
4.	ಸವದತ್ತಿ	45,000-00	2
5.	ಅಥಣಿ	20,000-00	1
6.	ಚಿಕ್ಕೋಡಿ	55,000-00	3
7.	ರಾಮದುರ್ಗ	20,000-00	1
8.	ಖಾನಾಪೂರ	20,000-00	1

ಮಂಜೂರಿ ವರ್ಷ 1992-93

ಕಾಮಗಾರಿ-ರಿಪೇರಿ -ಜೀರ್ಣೋದ್ಧಾರ,

ಸರ್ಕಾರಿ ಆದೇಶ ಸಂಖ್ಯೆ : 254 ಎಂಎಲ್‌ಡಿ 92, ದಿನಾಂಕ : 30-3-93.

1.	ಹುಕ್ಕೇರಿ	30,000-00	1
2.	ಬೈಲಹೊಂಗಲ	55,000-00	3
3.	ಚಿಕ್ಕೋಡಿ	80,000-00	3
4.	ಸವದತ್ತಿ	1,70,000-00	7
5.	ಗೋಕಾಕ	85,000-00	3
6.	ಅಥಣಿ	80,000-00	2
7.	ಬೆಳಗಾವಿ	40,000-00	1
8.	ಖಾನಾಪೂರ	1,00,000-00	1

ಸರ್ಕಾರಿ ಆದೇಶ ಸಂಖ್ಯೆ : ಆರ್‌ಡಿ 433 ಎಂಎಲ್‌ಡಿ 92, ದಿನಾಂಕ : 13-10-92.

1.	ಬೈಲಹೊಂಗಲ	60,000-00	4
2.	ಚಿಕ್ಕೋಡಿ	30,000-00	2
3.	ಸವದತ್ತಿ	25,000-00	2

4.	ಗೋಕಾಕ	35,000-00	3
5.	ಬೆಳಗಾವಿ	25,000-00	2
6.	ಖಾನಾಪೂರ	19,000-00	1
7.	ರಾಮದುರ್ಗ	35,000-00	3

ಮಂಜೂರಿ ವರ್ಷ 1992-93.

ಕಾಮಗಾರಿ ನಿರ್ಮಾಣ, ಕಲ್ಯಾಣ ಮಂಟಪ

ಸರ್ಕಾರಿ ಆದೇಶ ಸಂಖ್ಯೆ : ಆರ್‌ಡಿ 253 ಎಂಎಲ್‌ಡಿ 92, ದಿನಾಂಕ : 30-3-93.

1.	ಗೋಕಾಕ	1,00,000-00	1
2.	ಸವದತ್ತಿ	1,00,000-00	2
3.	ಬೈಲಹೊಂಗಲ	1,30,000-00	5
4.	ಬೆಳಗಾವಿ	1,10,000-00	3
5.	ರಾಮದುರ್ಗ	30,000-00	1
6.	ಚಿಕ್ಕೋಡಿ	25,000-00	1
7.	ಅಥಣಿ	25,000-00	1

ವಿಷಯ : - ಭಾರಿ ಮಳೆಯಿಂದ ಬೆಳಗಾವಿ ಜಿಲ್ಲೆಯಲ್ಲಿ ಆಗಿರುವ ಹಾನಿ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 387(461)

ಶ್ರೀ ಕೆ.ಸಿ. ಮೋಡಗೇಕರ್ ದೇಸಾಯಿ(ಹಿರೇಬಾಗೇವಾಡಿ)

ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

(ಅ) 1990-91, 1991-92 ಮತ್ತು 1992-93ರಲ್ಲಿ ಭಾರಿ ಮಳೆಯಿಂದ ಬೆಳಗಾವಿ ಜಿಲ್ಲೆಯಲ್ಲಿ ಹಾನಿಯಾಗಿರುವ ವಿಸ್ತೀರ್ಣವೆಷ್ಟು?

(ಆ) ಈ ಮೂರು ವರ್ಷಗಳಲ್ಲಿ ನೀಡಿರುವ ಪರಿಹಾರದ ಮೊತ್ತ ಎಷ್ಟು? (ವಿವರಗಳನ್ನು ತಾಲ್ಲೂಕುವಾರು ಒದಗಿಸುವುದು)

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು)

1990-91

ಪ್ರಾಣಹಾನಿ	ಜಾನುವಾರುಹಾನಿ	ಮನೆಗಳ ಹಾನಿ	
		ಸಂಖ್ಯೆ	ನಷ್ಟ ರೂ.
-ಇಲ್ಲ-	-ಇಲ್ಲ-	245	1,87,700

ಹಾನಿಗೊಳಗಾದ ಸೇತುವೆಗಳು		ಒಟ್ಟು ಹಾನಿ
ಸಂಖ್ಯೆ	ನಷ್ಟ	(ರೂ.ಗಳಲ್ಲಿ)
42	ರೂ.15,80,000	17,67,700-00

1991-92

ಪ್ರಾಣಹಾನಿ	ಜಾನುವಾರುಗಳ ಹಾನಿ	ಮನೆಗಳ ಹಾನಿ (ರೂ.ಲಕ್ಷಗಳಲ್ಲಿ)